ಸಾಕ್ಷಿಯನ್ನು ದಿನಾಂಕಃ **08-01-2026** ರಂದು ಕರೆದು ಪ್ರಮಾಣ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಪಿ.ಎಮ್.ವಿ ವಕೀಲರಿಂದ.**

ನಾನು ಮುಖ್ಯ ವಿಚಾರಣೆಯಾಗಿ ಸಲ್ಲಿಸಿದ ಪ್ರಮಾಣಪತ್ರದಲ್ಲಿ ಇರುವ ಅಂಶಗಳು ನನಗೆ ಗೊತ್ತು ಮತ್ತು ಸದರಿ ಅಂಶಗಳು ಸತ್ಯವಾಗಿರುತ್ತವೆ ಮತ್ತು ಅವುಗಳಲ್ಲಿ ಬರೆದಿರುವ ಸಂಗತಿಗಳನ್ನು ನಾನು ಓದಿ ತಿಳಿದುಕೊಂಡು ಅದರ ಮೇಲೆ ಸಹಿ ಮಾಡಿರುತ್ತೇನೆ.

**ಪಾಟೀ ಸವಾಲುಃ ಶ್ರೀ ಎ.ಎಸ್.ವಾಯ್ ವಕೀಲರಿಂದ.**

ಈ ದಾವೆಯನ್ನು ಸುಶೀಲಾಬಾಯಿ ಇವರು ಪಡಿಯಾರ ಮತ್ತು ಅಂಬಾದಾಸರವರ ಮೇಲೆ ಮಾಡಿರುತ್ತಾರೆ. ಈ ದಾವೆಯನ್ನು ಸುಶೀಲಾಬಾಯಿ ಇವರು ಪೋಟಗಿ ಸಲುವಾಗಿ ಹಾಕಿರುತ್ತಾಳೆ. ಈ ದಾವೆಯನ್ನು ಸುಶೀಲಾಬಾಯಿ ಇವರು ತನಗೆ ಮನೆ ಬೇಕು ಅಂತಾ ಹಾಕಿರುತ್ತಾರೆ. ಸದರಿ ಮನೆ ನಂಬರ ನನಗೆ ಹೇಳಲು ಬರುವುದಿಲ್ಲ. ಸದರಿ ಮನೆ ಮೊದಲು ಅಂಬಾದಾಸ ಇವರ ಹೆಸರಿನಲ್ಲಿ ಇತ್ತು. ಸದರಿ ಮನೆಯ ಮಾಲೀಕರು ಅಂಬಾದಾಸ ಆಗಿದ್ದರು. ಸದರಿ ಮನೆಯನ್ನು ಅಂಬಾದಾಸ ಇವರು ವಾದಿಗೆ ಮಾರಾಟ ಮಾಡಿರುತ್ತಾರೆ ಎಂದರ ಸರಿಯಲ್ಲ. ನಾನು ಸದರಿ ಮನೆಯ ಉತಾರವನ್ನು ನೋಡಿರುವುದಿಲ್ಲ. ಸದರಿ ಮನೆಯ ಉತಾರದಲ್ಲಿ ಅಂಬಾದಾಸ ಇವರ ಹೆಸರು ಇರುತ್ತದೆ. ಸದರಿ ದಾವಾ ಮನೆ ಆಸ್ತಿಗಳನ್ನು ಅಂಬಾದಾಸ ಇವರು ನೊಂದಾಯಿತ ಖರೀದಿ ಪತ್ರದ ಮುಖಾಂತರ ವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಮನೆಗಳನ್ನು ವಾದಿಯು ದಿನಾಂಕ 29-09-2010 ರಂದು ನೊಂದಾಯಿತ ಖರೀದಿ ಪತ್ರದ ಮುಖಾಂತರ ರೂ.6,20,000/- ಗಳಿಗೆ ಅಂಬಾದಾಸ ಇವರಿಂದ ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಖೊಟ್ಟಿಯಾಗಿ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಖರೀದಿ ಪತ್ರವನ್ನು ನಾನು ನೋಡಿರುವುದಿಲ್ಲ. ಸದರಿ ಖರೀದಿ ಪತ್ರ ಖೊಟ್ಟಿ ಇರುತ್ತದೆ ಎಂದು ನೀವು ಯಾವ ಆಧಾರದ ಮೇಲೆ ಹೇಳುತ್ತಿರಿ ಎಂದರೆ ಸಾಕ್ಷಿಯು ಅಂಬಾದಾಸ ಇವರು ತನ್ನ ಹೆಂಡತಿಯಾದ ಸುಶೀಲಾಬಾಯಿ ಇವಳನ್ನು ಮನೆಯಲ್ಲಿ ಬಿಟ್ಟು ಹೋಗಿದ್ದರಿಂದ ನಾನು ಹೇಳುತ್ತಿದ್ದೇನೆ ಎಂದು ನುಡಿಯುತ್ತಾರೆ. ಸದರಿ ದಾವಾ ಮನೆ ಆಸ್ತಿಗಳನ್ನು ಅಂಬಾದಾಸ ಇವರು ಸುಶೀಲಾಬಾಯಿ ಇವಳಿಗೆ ಗೊತ್ತಾಗದ ಹಾಗೆ ಮಾರಾಟ ಮಾಡಿದ್ದರಿಂದ ಸದರಿ ಖರೀದಿ ಪತ್ರ ಖೊಟ್ಟಿ ಆಗಿರುತ್ತದೆ ಎಂದು ನಾನು ನುಡಿಯುತ್ತಿದ್ದೇನೆ.

ಪ್ರತಿವಾದಿ ಸುಶೀಲಾಬಾಯಿ ಇವರ ಪರಿಚಯ ನಿಮಗೆ ಹೇಗೆ ಇರುತ್ತದೆ ಎಂದರೆ ಸಾಕ್ಷಿಯು ಪ್ರತಿವಾದಿಯ ಗಂಡ ಅಂಬಾದಾಸ ಇವರು ಮೋಟಾರ ವೈಂಡಿಂಗ್ ಮಾಡುತ್ತಿದ್ದರಿಂದ ನಾನು ನಮ್ಮ ಮೋಟಾರನ್ನು ವೈಂಡಿಂಗ್ ಮಾಡಿಸಲು ಅವರ ಹತ್ತಿರ ಹೋಗುತ್ತಿದ್ದರಿಂದ ಪ್ರತಿವಾದಿಯ ಪರಿಚಯ ನನಗೆ ಆಗಿರುತ್ತದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳ ಕುರಿತಂತೆ ಅಂಬಾದಾಸ ಮತ್ತು ವಾದಿ ನಡುವೆ ಆದ ವ್ಯವಹಾರದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ನನ್ನ ಸಾಕ್ಷ ಪ್ರಮಾಣ ಪತ್ರವನ್ನು ಬರೆಯಲು ನಾನೇ ಮಾಹಿತಿಯನ್ನು ನೀಡಿರುತ್ತೇನೆ.

ನನ್ನ ಸಾಕ್ಷ ಪ್ರಮಾಣ ಪತ್ರದಲ್ಲಿ ಪ್ರತಿವಾದಿ ಮತ್ತು ಅಂಬಾದಾಸ ಇವರ ನಡುವೆ ವೈವಾಹಿಕ ಜೀವನದ ಬಗ್ಗೆ ನ್ಯಾಯಾಲಯದಲ್ಲಿ ಪ್ರಕರಣಗಳು ನಡೆದಿದ್ದವು ಮತ್ತು ನ್ಯಾಯಾಲಯವು ಅಂಬಾದಾಸ ಇವರಿಗೆ ಜೀವನಾಂಶ ಕೊಡಲು ಆದೇಶ ಮಾಡಿರುತ್ತದೆ ಎಂದು ನಾನು ಬರೆಸಿರುವುದಿಲ್ಲ. ನನ್ನ ಸಾಕ್ಷ ಪ್ರಮಾಣ ಪತ್ರದ ಪ್ಯಾರಾ ನಂ.3 ರಲ್ಲಿರುವ ವಿಷಯಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ಸದರಿ ವಿಷಯಗಳನ್ನು ಪ್ರತಿವಾದಿ ನನಗೆ ಹೇಳಿದಂತೆ ನಾನು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಈ ದಾವೆಯ ಬಗ್ಗೆ ನನಗೆ ಯಾವುದೇ ವೈಯಕ್ತಿಕ ಮಾಹಿತಿ ಇಲ್ಲದೆ ಇದ್ದರೂ ಸಹಿತ ನಾನು ಸುಳ್ಳು ಸಾಕ್ಷ ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

Sd/-

ಪ್ರಧಾನ ದಿವಾಣಿ ನ್ಯಾಯಾಧೀಶರು
ಮುಧೋಳ.

**ಸಾಕ್ಷಿಯ ಸಹಿಃ**

LAGAMA SHIVANAPPA HUKKERI

Digitally signed by LAGAMA SHIVANAPPA HUKKERI
Date: 2026.02.17 18:02:55 +0530